# All India Radio: Bangalore
# National Bulletin In Kannada
# 17.08.2026  07.35 a.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**17.08.2026  07.35 a.m.**

**<><><><>**

ಮುಖ್ಯಾಂಶಗಳು

1. ಲಡಾಖ್ ಮತ್ತು ಜಮ್ಮು-ಕಾಶ್ಮೀರದಲ್ಲಿ ಇಂದಿನಿಂದ ಜನಗಣತಿ-೨೦೨೭ರ ಸ್ವಯಂ ನೋಂದಣಿ ಪ್ರಕ್ರಿಯೆ ಆರಂಭ
2. ಯುಜಿಸಿ ನೆಟ್-೨೦೨೭ ; ಪ್ರಶ್ನೆ ಪತ್ರಿಕೆಗಳಲ್ಲಿ ದೋಷಗಳ ಹಿನ್ನಲೆ ಮೂರು ವಿಷಯಗಳಿಗೆ ಮರು ಪರೀಕ್ಷೆ
3. ಭಾರತದ ಬ್ರಿಕ್ಸ್ ಅಧ್ಯಕ್ಷತೆಯಡಿ ಇಂದು ಪರಿಸರ ಕಾರ್ಯಕಾರಿ ಗುಂಪು ಮತ್ತು ಸಂಪರ್ಕ ಗುಂಪಿನ ಹಿರಿಯ ಅಧಿಕಾರಿಗಳ ಸಭೆ
4. ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ; ನವದೆಹಲಿಯಲ್ಲಿಂದು ಆರಂಭ

<><><><>

ಲಡಾಖ್ ಮತ್ತು ಜಮ್ಮು-ಕಾಶ್ಮೀರದ ಹಿಮಾವೃತ ಪ್ರದೇಶಗಳಲ್ಲಿ ಜನಗಣತಿ -೨೦೨೭ರ ಸ್ವಯಂ ನೋಂದಣಿ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದ್ದು, ಇದೇ ೩೧ರವರೆಗೆ ನಡೆಯಲಿದೆ. ಸೆಪ್ಟೆಂಬರ್ ೧ ರಿಂದ ೩೦ರವರೆಗೆ ನಡೆಯಲಿರುವ ಮನೆ ಮನೆ ಜನಗಣತಿ ಸಮೀಕ್ಷೆಗೂ ಮುನ್ನ ಸಾರ್ವಜನಿಕರು ತಮ್ಮ ವಿವರಗಳನ್ನು ಡಿಜಿಟಲ್ ರೂಪದಲ್ಲಿ ಸ್ವತಃ ದಾಖಲಿಸಲು ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಜನಗಣತಿ ನಿರ್ದೇಶಕ ಅಮಿತ್ ಶರ್ಮ ತಿಳಿಸಿದ್ದಾರೆ. ಈ ಬಾರಿಯ ಗಣತಿಯಲ್ಲಿ ಜಾತಿಯ ವಿವರವೂ ಸೇರಿದಂತೆ ಜನಸಂಖ್ಯಾ ವಿವರ, ಫಲವತ್ತತೆ ಉದ್ಯೋಗ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸುಮಾರು ೪೦ ಪ್ರಶ್ನೆಗಳಿವೆ. ಜಮ್ಮು-ಕಾಶ್ಮೀರದ ೧೬ ಜಿಲ್ಲೆಗಳ ಹಿಮಾವೃತ ಪ್ರದೇಶದ ನಿವಾಸಿಗಳು ಮತ್ತು ಲಡಾಖ್‌ನ ಎಲ್ಲಾ ಸಾರ್ವಜನಿಕರು ನಿಗದಿತ ಅವಧಿಯೊಳಗೆ ಸ್ವಯಂ ವಿವರ ನಮೂದಿಸುವಂತೆ ಕೋರಲಾಗಿದೆ. ಲಡಾಖ್ ಪ್ರದೇಶಕ್ಕೆ ೨೦೨೬ರ ಅಕ್ಟೋಬರ್ ೧ ರ ಮಧ್ಯರಾತ್ರಿಯನ್ನು ಉಲ್ಲೇಖಿತ ದಿನಾಂಕವನ್ನಾಗಿ ಅಧಿಸೂಚಿಸಲಾಗಿದ್ದು, ದೇಶದ ಉಳಿದ ಭಾಗಗಳಿಗೆ ೨೦೨೭ರ ಮಾರ್ಚ್ ೧

ಎಂದು ನಿಗದಿಪಡಿಸುವ ನಿರೀಕ್ಷೆಯಿದೆ. ಇನ್ನು ಲಡಾಖ್‌ನಲ್ಲಿರುವ ಮಿಲಿಟರಿ, ಐಟಿಬಿಪಿ ಮತ್ತು ವಾಯುಪಡೆಯಂತಹ ವಿಶೇಷ ಸೇನಾ ಸೌಲಭ್ಯಗಳನ್ನು ಗಣತಿಯ ೨ನೇ ಹಂತದಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

<><><>

ಯುಜಿಸಿ-ನೆಟ್ ಪರೀಕ್ಷೆಯ ಇಂಗ್ಲಿಷ್, ವಾಣಿಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಷಯಗಳ ಪ್ರಶ್ನೆಪತ್ರಿಕೆಗಳಲ್ಲಿ ಹಲವಾರು ದೋಷಗಳ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ-ಎನ್‌ಟಿಎ ಈ ಮೂರು ವಿಷಯಗಳಿಗೆ ಮರುಪರೀಕ್ಷೆಯನ್ನು ಘೋಷಿಸಿದೆ. ಸೆಪ್ಟೆಂಬರ್ ೯ ರಂದು ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧೨ ರವರೆಗೆ ಇಂಗ್ಲಿಷ್ ವಿಷಯದ ಪರೀಕ್ಷೆಯನ್ನು ಮೊದಲ ಪಾಳಿಯಲ್ಲಿ ನಡೆಸಲಾಗುವುದು ಮತ್ತು ವಾಣಿಜ್ಯಶಾಸ್ತ್ರ ವನ್ನು ಅದೇ ದಿನ ಮಧ್ಯಾಹ್ನ ೩ ರಿಂದ ಸಂಜೆ ೬ ರವರೆಗೆ ಎರಡನೇ ಪಾಳಿಯಲ್ಲಿ ನಡೆಸಲಾಗುವುದು ಎಂದು ಎನ್‌ಟಿಎ ತಿಳಿಸಿದೆ. ಸಮಾಜಶಾಸ್ತ್ರ ಪರೀಕ್ಷೆಯನ್ನು ಸೆಪ್ಟೆಂಬರ್ ೧೦ ರಂದು ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧೨ ರವರೆಗೆ ಮೊದಲ ಪಾಳಿಯಲ್ಲಿ  ನಡೆಸಲಾಗುವುದು. ಜೂನಿಯರ್ ರಿಸರ್ಚ್ ಫೆಲೋಶಿಪ್, ಸಹಾಯಕ ಪ್ರಾಧ್ಯಾಪಕರ ಅರ್ಹತೆ ಮತ್ತು ಪಿಎಚ್‌ಡಿ ಕಾರ್ಯಕ್ರಮಗಳ ಪ್ರವೇಶಕ್ಕಾಗಿ ಜೂನ್ ೨೨ ರಿಂದ ೩೦ ರವರೆಗೆ ೮೬ ವಿಷಯಗಳಲ್ಲಿ ಯುಜಿಸಿ-ನೆಟ್ ಪರೀಕ್ಷೆಯನ್ನು ಎನ್‌ಟಿಎ ನಡೆಸಿತ್ತು. ಕೆಲವು ದೋಷಗಳ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಈ ದೋಷಗಳನ್ನು ಪರಿಶೀಲಿಸಲು ಎನ್‌ಟಿಎ ಒಂದು ಸಮಿತಿಯನ್ನು ರಚಿಸಿತ್ತು. ನ್ಯಾಯಯುತ ಮತ್ತು ದೋಷ-ಮುಕ್ತ ಪರೀಕ್ಷೆಯನ್ನು ನಡೆಸುವ ಹಿತದೃಷ್ಟಿಯಿಂದ, ಈ ಮೂರು ವಿಷಯಗಳಿಗೆ ಮರುಪರೀಕ್ಷೆ ನಡೆಸಬೇಕೆಂದು ಸಮಿತಿ ಶಿಫಾರಸು ಮಾಡಿತ್ತು.

<><><>

ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯದ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಇಂದು ನವದೆಹಲಿಯಲ್ಲಿ 'ರಾಷ್ಟ್ರೀಯ ಅನುಭವ್ ಪ್ರಶಸ್ತಿ-೨೦೨೬' ಅನ್ನು ಪ್ರದಾನ ಮಾಡಲಿದ್ದಾರೆ.  ಈ ಕಾರ್ಯಕ್ರಮದಲ್ಲಿ 'ಪಿಂಚಣಿ ಮಿತ್ರ' ಕೈಪಿಡಿ ಹಾಗೂ ರಾಷ್ಟ್ರವ್ಯಾಪಿ 'ಡಿಜಿಟಲ್ ಜೀವನ್ ಪ್ರಮಾಣಪತ್ರ' ಅಭಿಯಾನ-೫ ರ ಮಾರ್ಗಸೂಚಿಗಳನ್ನು ಸಹ ಬಿಡುಗಡೆ ಮಾಡಲಾಗುವುದು ಎಂದು ಸಚಿವಾಲಯ ತಿಳಿಸಿದೆ. ಇದರ ಜೊತೆಗೆ, ನಿವೃತ್ತರಾಗುತ್ತಿರುವ ನೌಕರರಿಗಾಗಿ ರೂಪಿಸಲಾದ ಉತ್ಪನ್ನಗಳು ಮತ್ತು ಸೇವೆಗಳನ್ನು

ಪ್ರದರ್ಶಿಸಲು ೧೭ ಪಿಂಚಣಿ ವಿತರಣಾ ಬ್ಯಾಂಕ್‌ಗಳ ಪ್ರದರ್ಶನವನ್ನು ಸಹ ಆಯೋಜಿಸಲಾಗಿದೆ. ಈ ಬಾರಿಯ 'ರಾಷ್ಟ್ರೀಯ ಅನುಭವ್ ಪ್ರಶಸ್ತಿ'ಗೆ ಆಯ್ಕೆಯಾಗಿರುವ ೧೫ ಪ್ರಶಸ್ತಿ ವಿಜೇತರು ಪಾಸ್‌ಪೋರ್ಟ್ ಸೇವಾ ಕೇಂದ್ರಗಳ ಸ್ಥಾಪನೆ, ಹಳೆಯ ನಿಯಮಗಳ ರದ್ದು ಮತ್ತು ಹೊಸ ನಿಯಮಗಳ ರಚನೆ, ಆಡಳಿತ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ತಂತ್ರಜ್ಞಾನದ ಅಳವಡಿಕೆ ಮತ್ತು ಇಂಧನ ಸಂರಕ್ಷಣೆಯಂತಹ ಸರ್ಕಾರದ ಹಲವು ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

<><><><>

ಜಾರ್ಖಂಡ್ ಲೋಕಸೇವಾ ಆಯೋಗ ಜೆಪಿಎಸ್‌ಸಿ ಮತ್ತು ಸಿಬ್ಬಂದಿ ನೇಮಕಾತಿ ಆಯೋಗ ಜೆಎಸ್‌ಎಸ್‌ಸಿ ನಡೆಸಿದ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ ತೀವ್ರಗೊಂಡಿದ್ದು, ರಾಂಚಿಯಲ್ಲಿ ನಿನ್ನೆ ಪ್ರತಿಭಟನಾಕಾರರು ಮುಖ್ಯಮಂತ್ರಿ ಹೇಮಂತ್ ಸೊರೇನ್ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಆರ್‌ಜೆಡಿ ನಾಯಕ ತೇಜಸ್ವಿಯಾದವ್ ಅವರ ಅಣಕು ಪುತ್ಥಳಿಗಳನ್ನು ದಹಿಸಿ ಪ್ರತಿಭಟಿಸಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ವಿದ್ಯಾರ್ಥಿಗಳು ಜೆಪಿಎಸ್‌ಸಿ ಮತ್ತು ಜೆಎಸ್‌ಎಸ್‌ಸಿ ಪರೀಕ್ಷೆಗಳನ್ನು ಕೂಡಲೇ ರದ್ದುಗೊಳಿಸಬೇಕೆಂಬ ತಮ್ಮ ಬೇಡಿಕೆಗಳನ್ನು ಪುನರುಚ್ಛರಿಸಿದ್ದಾರೆ. ಇದರ ಜೊತೆಗೆ ಬರುವ ಇದೇ ೨೦ ರಂದು ಮುಖ್ಯಮಂತ್ರಿಗಳ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದ್ದಾರೆ. ಮತ್ತೊಂದೆಡೆ ಈ ಬಿಕ್ಕಟ್ಟು ಶಮನಗೊಳಿಸಲು ರಾಜ್ಯ ಸರ್ಕಾರ ಸಂದಾನದ ಮಾರ್ಗ ಅನುಸರಿಸಿದ್ದು, ಮಾತುಕತೆಗಾಗಿ ಇಂದು ಮಧ್ಯಾಹ್ನ ೨ ಗಂಟೆಗೆ ಪ್ರತಿಭಟನಾ ನಿರತ ವಿದ್ಯಾರ್ಥಿ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿದೆ.

<><><><>

ಭಾರತ ನಾಳೆ ನವದೆಹಲಿಯಲ್ಲಿ ೧೨ನೇ ಬ್ರಿಕ್ಸ್ ಪರಿಸರ ಸಚಿವರ ಸಭೆಯನ್ನು ಆಯೋಜಿಸಿದೆ. ಈ ಸಭೆಗೆ ಮುಂಚಿತವಾಗಿ ಇಂದು ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಕುರಿತಾದ ಪರಿಸರ ಕಾರ್ಯಕಾರಿ ಗುಂಪು ಮತ್ತು ಸಂಪರ್ಕ ಗುಂಪಿನ ಬ್ರಿಕ್ಸ್ ಹಿರಿಯ ಅಧಿಕಾರಿಗಳ ಸಭೆ ನಡೆಯಲಿದೆ. ಈ ಕಾರ್ಯಕ್ರಮ ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ೨೦೨೬ರ ಧ್ಯೇಯವಾಕ್ಯ ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ, ಎಂಬುದರ ಕುರಿತಾಗಿ ನಡೆಯಲಿದೆ. ಬ್ರಿಕ್ಸ್ ಪರಿಸರ ಸಚಿವರ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಪರಿಸರ, ಅರಣ್ಯ ಮತ್ತು

ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ವಹಿಸಲಿದ್ದಾರೆ. ಭಾರತದ ಅಧ್ಯಕ್ಷತೆಯ ಭಾಗವಾಗಿ, ಬ್ರಿಕ್ಸ್ ಪರಿಸರ ಕಾರ್ಯಕಾರಿ ಗುಂಪಿನ ಅಡಿಯಲ್ಲಿ ಕೇಂದ್ರೀಕೃತ ತೊಡಗಿಸಿಕೊಳ್ಳುವಿಕೆಗಾಗಿ ಭಾರತ, ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುವುದು, ಅರಣ್ಯೀಕರಣ, ಕಾಡ್ಗಿಚ್ಚು ನಿರ್ವಹಣೆ ಮತ್ತು ವಿಪತ್ತು ಸ್ಥಿತಿಸ್ಥಾಪಕತ್ವ, ವೃತ್ತಾಕಾರದ ಆರ್ಥಿಕತೆ ಮತ್ತು ಹೊಂದಾಣಿಕೆ ಎಂಬ ನಾಲ್ಕು ಆದ್ಯತೆಯ ಕ್ಷೇತ್ರಗಳನ್ನು ಗುರುತಿಸಿದೆ ಎಂದು ಸಚಿವಾಲಯ ತಿಳಿಸಿದೆ.

<><><><>

ವಿಶಾಖಪಟ್ಟಣಕ್ಕೆ ಬರುವ ಮತ್ತು ಅಲ್ಲಿಂದ ಹೊರಡುವ ಏರ್ ಇಂಡಿಯಾದ ಎಲ್ಲಾ ವಿಮಾನಗಳು ಇಂದಿನಿಂದ ಭೋಗಪುರಂನ ಹೊಸ ಅಲ್ಲೂರಿ ಸೀತಾರಾಮ ರಾಜು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣ ಕೋಡ್ ವಿಟಿಝೆಡ್ ಅನ್ನು ಬಳಸಿಕೊಂಡು ಕಾರ್ಯನಿರ್ವಹಿಸಲಿವೆ ಎಂದು ಘೋಷಿಸಿದೆ. ಭೋಗಪುರಂ ಮತ್ತು ದೆಹಲಿ ನಡುವೆ ವಾರಕ್ಕೊಮ್ಮೆ ೧೪ ವಿಮಾನಗಳನ್ನು ನಿರ್ವಹಿಸುವುದನ್ನು ಮುಂದುವರಿಸಲಾಗುವುದು ಎಂದು ಏರ್ ಇಂಡಿಯಾ ತಿಳಿಸಿದೆ. ೭೭ ಸಾವಿರದ ೩೪೨ ಚದರ ಮೀಟರ್‌ಗಳಲ್ಲಿ ವ್ಯಾಪಿಸಿರುವ ಹೊಸ ಟರ್ಮಿನಲ್, ಪ್ರಯಾಣಿಕರ ಸೌಕರ್ಯ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುತ್ತದೆ. ಇದು ೨೨ ಚೆಕ್-ಇನ್ ಕೌಂಟರ್‌ಗಳು, ೧೮ ಸ್ವಯಂ-ಬ್ಯಾಗೇಜ್ ಡ್ರಾಪ್ ಘಟಕಗಳು, ಸುಧಾರಿತ ಸ್ಕ್ರೀನಿಂಗ್ ವ್ಯವಸ್ಥೆಗಳು, ಆಧುನಿಕ ಬ್ಯಾಗೇಜ್ ನಿರ್ವಹಣಾ ಸೌಲಭ್ಯಗಳು ಮತ್ತು ತಡೆರಹಿತ ಪ್ರಯಾಣಿಕರ ಅನುಭವಕ್ಕಾಗಿ ಏಳು ಏರೋಬ್ರಿಡ್ಜ್‌ಗಳನ್ನು ಹೊಂದಿದೆ.

<><><><>

ನವದೆಹಲಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್ ಶಿಪ್‌ಗೆ ಚಾಲನೆ ದೊರೆಯಲಿದೆ. ಪಂದ್ಯಾವಳಿಯ ಮೊದಲ ದಿನದ ಭಾರತದ ಪ್ರಮುಖ ಆಟಗಾರರು ತಮ್ಮ ಸವಾಲು ಆರಂಭಿಸಲಿದ್ದಾರೆ. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಮಾಜಿ ವಿಶ್ವ ಚಾಂಪಿಯನ್ ಹಾಗೂ ೯ನೇ ಶ್ರೇಯಾಂಕಿತೆ ಪಿ.ವಿ.ಸಿಂಧು, ಐರ್ಲೆಂಡ್‌ನ ಸೋಫಿಯಾ ನೋಬಲ್ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ, ಸ್ಪೇನ್‌ನ ಪೌಲಾ ಲೋಪೆಜ್ ಹಾಗೂ ಲೂಸಿಯಾ ರೋಡ್ರಿಗಸ್ ಜೋಡಿಯನ್ನು ಎದುರಿಸಲಿದೆ. ಇನ್ನು ಸಂಜೆ ನಡೆಯಲಿರುವ

ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ಆಯುಷ್ ಶೆಟ್ಟಿ ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರ ಹಾಗೂ ಹಾಲಿ ಚಾಂಪಿಯನ್ ಚೀನಾದ ಶಿ ಯು ಕಿ ವಿರುದ್ಧ ಸೆಣಸಾಟ ನಡೆಸಲಿದ್ದಾರೆ. ಪುರುಷರ ಡಬಲ್ಸ್ ವಿಭಾಗದಲ್ಲಿ ೫ನೇ ಶ್ರೇಯಾಂಕಿತ ಭಾರತದ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಮೊದಲ ಸುತ್ತಿನಲ್ಲಿ 'ಬೈ' ಪಡೆದು ಈಗಾಗಲೇ ಎರಡನೇ ಸುತ್ತಿಗೆ ಪ್ರವೇಶಿಸಿದ್ದಾರೆ. ಮತ್ತೊಂದೆಡೆ, ಎಂ.ಆರ್.ಅರ್ಜುನ್ ಮತ್ತು ಹರಿಹರನ್ ಅಮ್ಸಕರುಣನ್ ಜೋಡಿಯು ಐರ್ಲೆಂಡ್‌ನ ಸ್ಕಾಟ್ ಗಿಲ್ಡಿಯಾ ಹಾಗೂ ಪೌಲ್ ರೆನಾಲ್ಡ್ಸ್ ಜೋಡಿಯನ್ನು ಎದುರಿಸಲಿದೆ. ಮಿಶ್ರ ಡಬಲ್ಸ್ ವಿಭಾಗದಲ್ಲಿ ೧೫ನೇ ಶ್ರೇಯಾಂಕಿತ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೋ ಜೋಡಿಯೂ ಸಹ 'ಬೈ' ಪಡೆದು ೩೨ರ ಹಂತಕ್ಕೆ ಮುನ್ನಡೆದಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>